**ಡಿ.ಡಬ್ಲ್ಯೂ-1**

**ದಿಃ 25.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 1ನೇ ಪ್ರತಿವಾದಿ ಪರ ಶ್ರೀ R.S.M.. ವಕೀಲರಿಂದ**

ದಾವಾ ಸ್ವತ್ತು ಕಂದಾಯ ಸರ್ವೆ ನಂಬರ 972 ರಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. OS No.619/2009 ಸರ್ವೆ ನಂಬರ 972 ಕ್ಕೆ ಸಂಬಂಧಪಟ್ಟಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಅಸಲು ದಾವೆ ಡಿಕ್ರಿಯಾಗಿದೆ ಎಂದು ಬರೆಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಅದನ್ನು ಪ್ರಶ್ನಿಸಿ ಸಲ್ಲಿಸಿದ್ದ RA No.296/2015 ಸಹ ವಜಾ ಆಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ RA ತೀರ್ಪನ್ನು ಪ್ರಶ್ನಿಸಿ 1ನೇ ಪ್ರತಿವಾದಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RSA No.100488/2016 ಸಲ್ಲಿಸಲಾಗಿದೆ ಎಂದರೆ ಸರಿ. ಸದರಿ ಪ್ರಕರಣ ಈಗಲೂ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ನನಗೆ ಸದರಿ ಅಪೀಲು ಬಾಕಿ ಇದ್ದರೂ ಸಹ ಆ ಬಗ್ಗೆ ನಾನು ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

ಶೇಖ ಅಬ್ದುಲಸಾಬ್ ವಲ್ಲದ ಶೇಖ ಅಬ್ದುಲಖಾದರ್ ಸಾಹೇಬ ಪೀರಜಾದೆ ರವರು ಸರ್ವೆ ನಂಬರ 972 ರ ಜಮೀನನ್ನು ದಿನಾಂಕ 15.05.1866 ರಂದು Permanent Lease ನ್ನು ಮಹಾನಗರ ಪಾಲಿಕೆ/ಮುನಿಸಿಪಲ್ ಬೋರೊ ಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಲೀಸ್ ಸಮಯದಲ್ಲಿ ಸದರಿ ಸ್ವತ್ತಿನ ಸ್ವಾಧೀನವನ್ನು ಮಹಾನಗರ ಪಾಲಿಕೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ರೀತಿ ನೀಡಿದ್ದ ಲೀಸ್ ನ್ನು ಮುಕ್ತಾಯಗೊಳಿಳಲಾಗಿದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ ಮಹಾನಗರ ಪಾಲಿಕೆಯ ಸ್ವಾಧೀನದಲ್ಲಿದೆ ಆದರೆ ನನ್ನ ಸ್ವಾಧೀನದಲ್ಲಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಸದರಿ ಸರ್ವೆ ನಂಬರಗೆ ಸಂಬಂಧಪಟ್ಟಂತೆ ನನ್ನ ಹೆಸರು ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.